# ಸುಖದೂರು

ನಡಹಳ್ಳಿ ವಸಂತ್

ಕಥಾನಾಯಕನ ಹೆಸರು ದಡ್ಡ. ಅವನು ಮತ್ತು ಅವನ ಸ್ನೇಹಿತರೆಲ್ಲಾ ಸೇರಿ ಸುಖದೂರಿಗೆ ಪ್ರವಾಸ ಹೊರಟಿದ್ದರು. ಸುಖದೂರು ಒಂದು ಅದ್ಭುತ ಪ್ರವಾಸಿ ತಾಣವೆಂದು ಹೆಸರಾಗಿತ್ತು. ಅಲ್ಲಿಗೆ ಹೋಗುವ ದಾರಿ ಮಾತ್ರ ಸಾಕಷ್ಟು ತೊಡಕುಗಳಿಂದ ಕೂಡಿದ್ದು ಕಾಲ್ನಡಿಗೆಯಲ್ಲಿ ಮಾತ್ರ ಹೋಗುವುದು ಸಾಧ್ಯವಿತ್ತು. ಜೊತೆಗೆ ನಿರ್ಜನವಾದ ದಟ್ಟ ಕಾಡು ಪ್ರದೇಶ ಬೇರೆ. ಹಾಗಾಗಿ ಅಲ್ಲಿಗೆ ಪ್ರವಾಸ ಹೋಗಬೇಕೆಂದು ಎಲ್ಲರೂ ಆಸೆಪಡುತ್ತಿದ್ದರೂ ಆ ಪ್ರಯತ್ನಕ್ಕೆ ಕೈಹಾಕುವವರು ಸ್ವಲ್ಪ ಕಡಿಮೆಯೇ.

ಸ್ನೇಹಿತರೆಲ್ಲಾ ಸಾಕಷ್ಟು ದೂರ ಹೋದ ಮೇಲೆ ಅಲ್ಲಿ ಒಮ್ಮೆಲೆ ಹತ್ತಾರು ದಾರಿಗಳು ತೆರೆದುಕೊಂಡವು. ಸುಖದೂರನ್ನು ತಲುಪಲು ಖಚಿತವಾದ ದಾರಿ ಯಾವುದು ಎಂದು ಯಾರಿಗೂ ಗೊತ್ತಿರಲಿಲ್ಲ. ಕೇಳಿ ಮುಂದುವರೆಯೋಣ ಎಂದರೆ ಆ ಕಡೆ ಜನರ ಓಡಾಟ ಕಡಿಮೆಯಾಗಿತ್ತು. ಆಗಾಗ ಯಾವುದಾದರೂ ದಾರಿಯಿಂದ ಹಿಂತಿರುಗುತ್ತಿದ್ದ ಕೆಲವರು ಇವರ ಪ್ರಶ್ನೆಗಳಿಗೆ ಉತ್ತರಿಸಲು ನಿರಾಕರಿಸಿ, ಸುಖದೂರಿನ ದಾರಿಯನ್ನು ನೀವೇ ಹುಡುಕಿಕೊಳ್ಳಬೇಕು. ಇನ್ನೊಬ್ಬರು ಹೋದ ದಾರಿಯಲ್ಲಿ ಹೋದರೆ ನಿಮಗೆ ಅದು ಸಿಗಲಾರದು ಎನ್ನುತ್ತಾ ಮುಂದೆ ಹೋಗುತ್ತಿದ್ದರು.

ಸ್ನೇಹಿತರೆಲ್ಲಾ ಮುಂದೇನು ಮಾಡುವುದೆಂದು ತಿಳಿಯದೆ ಸುಮ್ಮನೆ ಕುಳಿತರು. ಎಲ್ಲವನ್ನು ಸರಿಯಾಗಿ ತಿಳಿದುಕೊಂಡು ನಾಳೆ ಮತ್ತೆ ಬರೋಣ, ಎಂದು ಕೆಲವರು ಸಲಹೆ ಮಾಡಿದರು. ಹೇಗೂ ಬಂದಿದ್ದೇವಲ್ಲವೇ, ಸಂಜೆಯೊಳಗೆ ಹಿಂದಿರುಗಲು ಇನ್ನೂ ಸಾಕಷ್ಟು ಸಮಯವಿದೆ, ಹಾಗಾಗಿ ಕಾದು ನೋಡೋಣ ಎಂದು ಇನ್ನೂ ಕೆಲವರು ಅಭಿಪ್ರಾಯಪಟ್ಟರು. ಕೊನೆಗೆ ಸಂಜೆಯವರೆಗೆ ಕಾಯುವ ನಿರ್ಧಾರಕ್ಕೆ ಎಲ್ಲರೂ ಬಂದರು.

ದಡ್ಡನಿಗೆ ಸುಮ್ಮನೆ ಕೂರಲು ಮನಸ್ಸಾಗಲಿಲ್ಲ. ನಾನು ಯಾವುದಾದರೂ ಒಂದು ದಾರಿಯಲ್ಲಿ ಹೋಗಿ ನೋಡಿಕೊಂಡು ಬರುತ್ತೇನೆ ಎಂದು ಸ್ನೇಹಿತರಿಗೆ ಹೇಳಿ ಹೊರಟ. ಬೇಡ ಮಾರಾಯ ಒಬ್ಬೊಬ್ಬರೇ ಹೋಗುವುದು ಅಪಾಯ ಎಂಬ ಸ್ನೇಹಿತರ ಎಚ್ಚರಿಕೆಯನ್ನು ಅವನು ಗಮನಕ್ಕೆ ತೆಗೆದುಕೊಳ್ಳಲಿಲ್ಲ.

ಹೋಗಿ ಅರ್ಧ ಗಂಟೆಯಾದರೂ ದಡ್ಡ ಹಿಂತಿರುಗದಿದ್ದಾಗ ಸ್ನೇಹಿತರಿಗೆ ಆತಂಕವಾಯಿತು. ಆದರೆ ಕೆಲವೇ ಕ್ಷಣಗಳಲ್ಲಿ ಅವನು ಹಿಂತಿರುಗಿದ. ‘ಈ ದಾರಿ ಅಲ್ಲ ಕಣ್ರಪ್ಪೋ, ಮುಂದೆ ಒಂದು ಭಾರೀ ನದಿ ಅಡ್ಡ ಬರುತ್ತೆ’ ಎಂದು ದಡ್ಡ ಹೇಳಿದಾಗ ಸ್ನೇಹಿತರು ನಕ್ಕರು.

ಆದರೆ ದಡ್ಡ ಸುಮ್ಮನೆ ಕೂರದೆ ಮತ್ತೊಂದು ದಾರಿಯಲ್ಲಿ ನಡೆದ. ಈ ಬಾರಿ ಒಂದು ಗಂಟೆಯ ನಂತರ ಸುಸ್ತಾಗಿ ಹಿಂತಿರುಗಿದ ಅವನು ಮತ್ತೆ ನಿರಾಶಾದಾಯಕ ಸುದ್ದಿ ತಂದಿದ್ದ. ಅವನು ಈ ಬಾರಿ ಹೋದ ದಾರಿ ಒಂದು ದೊಡ್ಡ ಬೆಟ್ಟದ ಬುಡದಲ್ಲಿ ಕೊನೆಗೊಂಡಿತ್ತು.

ಸ್ವಲ್ಪ ಸುಧಾರಿಸಿಕೊಂಡ ದಡ್ಡ, ಕತ್ತಲಾಗಲು ಇನ್ನೂ ಎರಡು ಗಂಟೆ ಇದೆ. ನಾನು ಇನ್ನೂ ಒಂದು ದಾರಿಯಲ್ಲಿ ಹೋಗಿ ಪ್ರಯತ್ನಿಸುತ್ತೇನೆ ಎಂದು ಹೊರಟ. ‘ಮಜವಾಗಿ ವಿಸ್ಕಿ ಹೊಡೆದು ಇಸ್ಪೀಟ್ ಆಡೋಣ ಬಾರಲೇ, ಯಾಕೆ ಸುಮ್ಮನೆ ಸುಸ್ತು ಮಾಡಿಕೊಳ್ತೀಯಾ’ ಎಂಬ ಸ್ನೇಹಿತರ ಮಾತಿಗೆ ನಕ್ಕು ಮುಂದೆ ಹೋದ.

ಅವನು ಎರಡು ಗಂಟೆಯಾದರೂ ಹಿಂತಿರುಗದಿದ್ದಾಗ ಸ್ನೇಹಿತರಿಗೆ ಮತ್ತೆ ಆತಂಕವಾಯಿತು. ಅವನನ್ನು ಬಿಟ್ಟು ಊರಿಗೆ ಹಿಂತಿರುಗಲು ಅವರ ಮನಸ್ಸು ಒಪ್ಪಲಿಲ್ಲ. ಸ್ವಲ್ಪ ಹೊತ್ತಿನಲ್ಲಿ ದಡ್ಡ ಓಡುತ್ತಾ ಬರುವುದು ಕಾಣಿಸಿತು. ಅವನು ಯಾವುದೋ ಅಪಾಯಕ್ಕೆ ಸಿಕ್ಕಿಹಾಕಿಕೊಂಡಿರಬೇಕು ಎಂದು ಅವರಿಗೆ ಅನ್ನಿಸಿತು.

ಕುಳಿತು ಸ್ವಲ್ಪ ಹೊತ್ತು ಸುಧಾರಿಸಿಕೊಂಡ ಮೇಲೆ ದಡ್ಡ ತಾನು ಸುಖದೂರಿಗೆ ಹೋಗಿ ತಲುಪಿದ್ದು ಮತ್ತು ಅಲ್ಲಿನ ಅದ್ಭುತ ಜೀವನದ ಬಗೆಗೆ ಸ್ನೇಹಿತರಿಗೆ ವಿವರಿಸಿದ. ಅಚ್ಚರಿಯಿಂದ ದಡ್ಡನ ಮಾತನ್ನು ಕೇಳಿದ ಅವರು ಹೇಗೂ ನಮಗೆ ಈಗ ಯಾವ ದಾರಿಯಲ್ಲಿ ಹೋಗಬೇಕು ಅಂತ ತಿಳಿಯಿತಲ್ಲಾ, ನಾಳೆ ಬಂದು ಇದೇ ದಾರಿಯಲ್ಲಿ ಹೋದರಾಯಿತು ಎಂದು ತಮ್ಮನ್ನು ಸಮಾಧಾನಪಡಿಸಿಕೊಂಡರು.

ಆಗ ದಡ್ಡ ಹೇಳಿದ ಸುಖದೂರಿನ ಜನ ನನಗೆ ಹೇಳಿದ ಪ್ರಕಾರ ಅಲ್ಲಿಗೆ ತಲುಪಲು ನೂರಾರು ದಾರಿಗಳಿವೆಯಂತೆ. ಆದರೆ ಅವರು ಪ್ರತಿದಿನ ಕೆಲವೇ ದಾರಿಗಳನ್ನು ಮಾತ್ರ ತೆರೆದಿಡುತ್ತಾರಂತೆ. ಉಳಿದ ದಾರಿಗಳಿಗೆ ಅಡ್ಡವಾಗಿ ಬೆಟ್ಟ, ನದಿ, ಮರಳುಗಾಡುಗಳನ್ನೆಲ್ಲಾ ಸೃಷ್ಟಿಸಿ ಬಿಡುತ್ತಾರಂತೆ. ಹಾಗಾಗಿ ಯಾರೂ ಇತರರು ಕಂಡುಕೊಂಡ ದಾರಿಯಲ್ಲಿ ಹೋಗಿ ಸುಖದೂರನ್ನು ಸೇರಲು ಸಾಧ್ಯವೇ ಇಲ್ಲವಂತೆ. ಎಲ್ಲರೂ ಅವರವರ ದಾರಿಗಳನ್ನು ಅವರವರೇ ಹುಡುಕಿ ಕೊಳ್ಳಬೇಕಂತೆ.

ಸ್ನೇಹಿತರೆಲ್ಲಾ ಸುಖದೂರನ್ನು ನೋಡುವುದು ತಮ್ಮ ಭಾಗ್ಯದಲ್ಲಿ ಬರೆದಿಲ್ಲ ಎಂದು ನಿರಾಸೆಯಿಂದ ಹಿಂತಿರುಗಿದರು.

ದಡ್ಡ ಖುಷಿಯಿಂದ ಮನೆಗೆ ಬಂದು ತನ್ನ ಪುಸ್ತಕದಲ್ಲಿ ಚಿಕ್ಕದಾಗಿ ಗೀಚಿದ; ತಪ್ಪೇ ಮಾಡದವನಿಗಿಂತ ಹೊಸ ಹೊಸ ತಪ್ಪುಗಳನ್ನು ಮಾಡುವವನು ಜೀವನದಲ್ಲಿ ಮುಂದೆ ಹೋಗುವ ಸಾಧ್ಯತೆ ಹೆಚ್ಚಾಗಿರುತ್ತದೆ.

ನಂತರ ಹೊಟ್ಟೆತುಂಬಾ ಊಟ ಮಾಡಿ ಎರಡು ವರ್ಷದ ಮಗಳು ಹಸನ್ಮುಖಿಯ ಜೊತೆ ಆಟವಾಡುತ್ತಾ ನಿದ್ದೆಹೋದ. ಮತ್ತೊಮ್ಮೆ ಸುಖದೂರಿಗೆ ಹೋಗಬೇಕೆಂದು ಅವನಿಗೆ ಅನ್ನಿಸಲೇ ಇಲ್ಲ.



ಶಶಿಧರ ಹಳೇಮನಿ